ಗೊತ್ತಾದದ್ದೆ ಅವರ ಮೊದಲ ಪತ್ನಿ ಪಾರ್ವತಮ್ಮ ಮಗನ ಮನೆ ಸೇರಲು ಬೆಂಗಳೂರು ಬಸ್ ಹತ್ತುತ್ತಾರೆ. ಪಾರ್ವತಮ್ಮ ಮತ್ತು ಬದರಿನಾಥರ ನಡುವೆ ಬಹುದೊಡ್ಡ ಬೌದ್ಧಿಕ ಅಂತರವಿದೆ. ಪ್ರಾಥಮಿಕ ಶಾಲೆಯ ಮೆಟ್ಟಿಲು ಮಾತ್ರ ಹತ್ತಿದ್ದ ಪಾರ್ವತಮ್ಮನನ್ನು ಮದುವೆಯಾಗಲು ಬದರಿನಾಥರಿಗೆ ಮರಣಶಯ್ಯೆಯಲ್ಲಿರುವ ಅವ್ವನ ಆಸೆ ಈಡೇರಿಸುವುದೇ ಕಾರಣವಾಗಿತ್ತು. ಬೌದ್ಧಿಕ ಸಾಂಗತ್ಯವನ್ನು ಅರಸುತ್ತಿದ್ದವರಿಗೆ ವಸುಮತಿ ಎದುರಾಗುತ್ತಾಳೆ. ಆದರೆ ಅವರಿಬ್ಬರ ನಡುವೆ ವಯಸ್ಸಿನ ಅಂತರವಿದೆ. ಈ ಅಂತರವೇ ಬದರಿನಾಥರಲ್ಲಿ ವಸುಮತಿ ಕುರಿತು ಅನುಮಾನ ಹೊಗೆಯಾಡಲು ಕಾರಣವಾಗುತ್ತದೆ. ತಮ್ಮ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಮಾಡುತ್ತಿರುವ ದಿನಕರನೊಂದಿಗೆ ಸಂಬಂಧ ಕಲ್ಪಿಸಿ ವಸುಮತಿಯನ್ನು ಮನೆಯಿಂದ ಹೊರಹಾಕಿದ ಬದರಿನಾಥರು, ಆತ್ಮಹತ್ಯೆಗೆ ಶರಣಾಗುತ್ತಾರೆ. 'ಇಜ್ಜೋಡು' ಎಂದು ಹೆಸರಿಸಿ ಕನ್ನಡದ ಪ್ರಮುಖ ವಾರಪತ್ರಿಕೆಗೆ ಕಳುಹಿಸಿದ ಕೆಲವೇ ದಿನಗಳಲ್ಲಿ ಕಥೆ ಪ್ರಕಟವಾಗಿ ಪದ್ಮನಾಭ ಖುಷಿಗೊಂಡ. ಆ ವರ್ಷದ ಸಾಹಿತ್ಯ ಅಕಾಡೆಮಿಯ ಸಂಕಲನದಲ್ಲಿ ಕಥೆ ಸೇರ್ಪಡೆಯಾಗಿ ಅವನ ಖುಷಿಯನ್ನು ಇಮ್ಮಡಿಗೊಳಿಸಿತು.

***

ತನ್ನ ಕಥೆಯ ಪಾತ್ರವೊಂದು ನೇರಾನೇರ ತನ್ನೊಂದಿಗೆ ಮಾತನಾಡಿದ ದಿನದಿಂದ ಪದ್ಮನಾಭನಿಗೆ ತಾನು ಬರೆದ ಕಥೆ ಓದಲು ಒಂದು ರೀತಿಯ ಭಯ ಶುರುವಾಯಿತು. ಆ ದಿನ ತನ್ನ ಕಥೆಯನ್ನು ಓದುತ್ತಿರುವ ಗಳಿಗೆಯೇ ವಸುಮತಿ ತನ್ನೊಂದಿಗೆ ಮಾತನಾಡಿದ್ದೆಂದು ಅವನಿಗೆ ಸರಿಯಾಗಿ ನೆನಪಿದೆ. ಈ ವಿಷಯವನ್ನು ಆಡಳಿತ ಭವನದ ಸಹೋದ್ಯೋಗಿಗಳೊಂದಿಗೆ ಚರ್ಚಿಸಬೇಕೆಂದವನಿಗೆ ಅದೇನೋ ಹಿಂಜರಿಕೆ ಆದಂತಾಗಿ ಪ್ರಯತ್ನವನ್ನು ಕೈಬಿಟ್ಟ. ಶೇಷಗಿರಿ ಜೊತೆ ಮಾತನಾಡಲು ಪ್ರಯತ್ನಿಸಿದನಾದರೂ ಅವನೇನಾದರೂ ತನಗೆ ಮತಿಭ್ರಮಣೆಯಾಗಿದೆ ಎಂದು ವಿಶ್ವವಿದ್ಯಾಲಯದ ತುಂಬೆಲ್ಲ ಪ್ರಚಾರ ಮಾಡಿದರೆ ಎಂದು ಹೆದರಿಕೆಯಾಗಿ ಹಿಂದೆ ಸರಿದ. ಹೆಂಡತಿ ಮತ್ತು ಮಕ್ಕಳು ರಜಾದಿನಗಳೆಂದು ಊರಿಗೆ ಹೋಗಿದ್ದು, ಈಗ ಮನೆಯಲ್ಲಿ ತಾನು ಒಬ್ಬನೇ ಇರುವ ನೆನಪಾಗಿ ಅರೆಕ್ಷಣ ಪದ್ಮನಾಭನ ಮೈ ಭಯದಿಂದ ಕಂಪಿಸಿತು. ಇದೇ ವಿಚಾರವನ್ನು ಮನಸ್ಸಿನ ತುಂಬ ತುಂಬಿಕೊಂಡು ಮನೆಗೆ ಬಂದ ಪದ್ಮನಾಭ ರಾತ್ರಿ ಊಟವಾದದ್ದೇ ಧೈರ್ಯ ತಂದುಕೊಂಡು ಕಥಾಸಂಕಲವನ್ನು ಕೈಗೆತ್ತಿಕೊಂಡ. ಕಥೆಯ ಒಂದೆರಡು ಸಾಲುಗಳನ್ನು ಓದಿದ್ದೇ ತಡ, ಕೈಯಲ್ಲಿ ಹಿಡಿದಿದ್ದ ಕಥೆಯ ಪುಸ್ತಕ ಭಾರವಾದಂತಾಗಿ ಹೆಣ್ಣು ಧ್ವನಿಯೊಂದು ಸ್ಪಷ್ಟವಾಗಿ ಕೇಳಿಸಲಾರಂಭಿಸಿತು.

'ಪದ್ಮನಾಭ, ನಿಮ್ಮ ಜೊತೆ ನಾನು ಇನ್ನೂ ಒಂದಿಷ್ಟು ಮಾತನಾಡಬೇಕಿದೆರೀ. ಆವತ್ತು ನಿಮಗೆ ನಿದ್ದೆ ಬಂತು ಅಂತ ನಾನು ವಾಪಸ್ಸು ಹೋದೆ. ಕಳೆದ ನಾಲ್ಕು ದಿನಗಳಿಂದ ನೀವು ಕಥೆ ಪುಸ್ತಕ ತೆರೆದೇ ಇಲ್ಲ. ನಾಲ್ಕು ದಿನಗಳಿಂದ ನಿಮ್ಮ ದಾರಿ ನೋಡುತ್ತಿದ್ದೆ. ಇನ್ನೂ ಕೆಲವು ಪ್ರಶ್ನೆಗಳಿವೆ. ಇವಿಷ್ಟು ಕೇಳಿ ನಾನು ಹೋಗ್ತೀನಿ. ಮತ್ತೆ ಬರಲ್ಲ' – ವಸುಮತಿಯ ಧ್ವನಿ ಈ ಹಿಂದಿನಕ್ಕಿಂತ ಈಗ ಖಡಕ್ಕಾಗಿತ್ತು. ಪುಸ್ತಕ ಮುಚ್ಚಿಡಬೇಕು ಅಂತ ಅನಿಸಿದರೂ ಪದ್ಮನಾಭ ವಸುಮತಿ ಏನು ಕೇಳಬಹುದೆಂದು ಕುತೂಹಲದಿಂದ ಕಾದು ಕುಳಿತ.

'ಅಲ್ರೀ, ನನಗೂ ವಯಸ್ಸಿದೆ, ಸೌಂದರ್ಯ ಇದೆ. ಆಸೆ ಕನಸುಗಳಿವೆ. ಪಾಂಡಿತ್ಯ ಇದೆ ಎಂದ ಮಾತ್ರಕ್ಕೆ ಮುದುಕನನ್ನು ಮದುವೆ ಆಗೋಕೆ ನಾನು ಹೇಗೆ ಸಿದ್ಧಳಾಗ್ತೀನಿ. ಗೌತಮಿ, ಅಹಲ್ಯೆ ಅಂಥ ಋಷಿಪತ್ನಿಯರೇ ಈ ಶರೀರದ ಬಯಕೆ ಎದುರು ಸೋತು ಹೋದರು. ಇನ್ನು ನನ್ನದೇನು ಲೆಕ್ಕ. ವಯಸ್ಸಾದ ಪ್ರೊಫೆಸರ್ ಬದರಿನಾಥರ ಜೊತೆ ಮದುವೆ ಮಾಡಿಸಿ, ಅವರ ಪಿಎಚ್.ಡಿ. ವಿದ್ಯಾರ್ಥಿ ದಿನಕರನೊಂದಿಗೆ ನನಗೆ ಸಂಬಂಧ ಕಲ್ಪಿಸಿ ಪ್ರೊಫೆಸರ್ ತಲೆಯಲ್ಲಿ ಅನುಮಾನದ ಹುಳು ಬಿಟ್ಟು ಮನೆಯಿಂದ ನನ್ನನ್ನು ಹೊರಹಾಕಿಸಲಿಕ್ಕೆ ಎಷ್ಟು ಧೈರ್ಯ ನಿಮಗೆ?'

ವಸುಮತಿಯ ಮಾತಿನ ಆಕ್ರಮಣದಿಂದ ಪದ್ಮನಾಭ ಕಂಗಾಲಾದ. ಟೇಬಲ್ ಮೇಲಿಟ್ಟಿದ್ದ ಗ್ಲಾಸಿನಿಂದ ತಣ್ಣಗಿನ ನೀರನ್ನು ಗಟಗಟನೆ ಕುಡಿದು ಮುಖದಲ್ಲಿ ಧಾರಾಕಾರವಾಗಿ ಹರಿಯುತ್ತಿದ್ದ ಬೆವರನ್ನು ಒರೆಸಿಕೊಂಡು ಮತ್ತೆ ದೃಷ್ಟಿಯನ್ನು ಪುಸ್ತಕದೊಳಗೆ ಹುದುಗಿಸಿದ.

'ಬೆವರುತ್ತಿದ್ದೀರೇನ್ರಿ ಪದ್ಮನಾಭ. ಅಂದು ಕಥೆ ಬರೆಯುವಾಗ ಈ ವಸುಮತಿಗೆ ಅನ್ಯಾಯ ಮಾಡ್ತಿದ್ದೀನಿ ಅಂತ ಕಿಂಚಿತ್ ಯೋಚನೆ ಕೂಡ ನಿಮಗೆ ಬರಲಿಲ್ಲವಲ್ರೀ. ಪಾಂಡಿತ್ಯ ಅಂತೆ, ಪಿಎಚ್.ಡಿ. ಅಂತೆ. ಪ್ರೊಫೆಸರ್‌ನದು ಮುದಿ ಚಪಲ ಅಂತ ಹೇಳೋಕೆ ಏನಾಗಿತ್ತು ನಿಮಗೆ. ಯೂನಿವರ್ಸಿಟಿನಲ್ಲಿ ಕೆಲಸ ಮಾಡ್ತಿದ್ದೀರಲ್ಲ, ಈ ಮುದಿ ಪ್ರೊಫೆಸರ್‌ಗಳ ಹಗರಣಗಳು ಕಣ್ಣಿಗೆ ಬಿದ್ದಿರಬಹುದಲ್ಲ. ಎಷ್ಟಾದರೂ ನೀವು ಗಂಡಸರು ನೋಡಿ. ಹೆಣ್ಣಿನ ಸಂಕಟ ನಿಮಗೆ ಹೇಗೆ ಅರ್ಥ ಆಗ್ಬೇಕು. ಪ್ರತಿಯೊಂದನ್ನು ಪುರುಷ ಭಾವದಿಂದಾನೇ ನೋಡ್ತೀರಿ. ಹಾಗೆ ನನ್ನನ್ನು ಪ್ರೊಫೆಸರ್ ಮನೆಯಿಂದ ಹೊರಗೆ ಕಳುಹಿಸೋದೆ ನಿಮ್ಮ ಉದ್ದೇಶ ಆಗಿದ್ದಿದ್ದರೆ, ನನ್ನದೇ ವಯಸ್ಸಿನ ದಿನಕರನ ಜೊತೆ ಕಳುಹಿಸಬಹುದಿತ್ತಲ್ಲ. ವೇಳೆಯಲ್ಲದ ವೇಳೆಯಲ್ಲಿ ಒಂಟಿ ಹೆಣ್ಣನ್ನು ಮನೆಯಿಂದ ಹೊರಗೆ ಹಾಕ್ಸೀರಲ್ಲ, ಒಂದಿಷ್ಟಾದರೂ ಕರುಣೆ ಎನ್ನುವುದು ಇದೆ ಏನ್ರೀ ನಿಮಗೆ. ನಿಮ್ಮ ಮುಂದಿನ ಕಥೆಯಲ್ಲಾದರೂ ಈ ವಸುಮತಿಗೆ ನ್ಯಾಯ ಕೊಡಿಸಿ'.

ಪದ್ಮನಾಭನಿಗೆ ಕೈಯಲ್ಲಿ ಹಿಡಿದಿದ್ದ ಪುಸ್ತಕ ತನ್ನ ಮೊದಲಿನ ಭಾರವನ್ನು ಕಳೆದುಕೊಂಡು ಹಗುರಾದಂತೆ ಭಾಸವಾಯಿತು. ಅಂದು ಮಂಚದ ಮೇಲೆ ಮಲಗಿದ ಪದ್ಮನಾಭನಿಗೆ ನಿದ್ದೆ ಹತ್ತಿರ ಸುಳಿಯಲಿಲ್ಲ. ಮನಸ್ಸು ವಸುಮತಿಯ ಪಾತ್ರದ ಸುತ್ತ ಗಿರಕಿ ಹೊಡೆಯುತ್ತ ನಿದ್ದೆ ದೂರಾಗಿ, ಗಳಿಗೆಗೊಮ್ಮೆ ಮಗ್ಗಲು ಬದಲಿಸುತ್ತಿದ್ದವನಿಗೆ ಜೋಂಪು ಹತ್ತುವ ವೇಳೆಗಾಗಲೇ ಪೂರ್ವದಲ್ಲಿ ಸೂರ್ಯ ಉದಯಿಸುತ್ತಿದ್ದ.

***

ಎರಡು ದಿನಗಳಿಂದ ಮನಸ್ಸಿನ ತುಂಬೆಲ್ಲ ಅಶಾಂತಿ ತುಂಬಿಕೊಂಡಂತಾಗಿ ಪದ್ಮನಾಭನಿಗೆ ವಿಶ್ವವಿದ್ಯಾಲಯದ ತನ್ನ ದಿನನಿತ್ಯದ ಕೆಲಸದಲ್ಲಿ ಏಕಾಗ್ರತೆ ಇಲ್ಲದಂತಾಗಿತ್ತು. ವಸುಮತಿಯ ಮಾತಿನ ದಾಳಿಯಿಂದ ಅವನ ತಲೆ ಗೊಂದಲದ ಗೂಡಾಗಿತ್ತು. ವಸುಮತಿಯ ಪಾತ್ರವನ್ನು ಬರೆಯುವಾಗ ತನ್ನದು ಏಕಪಕ್ಷೀಯ ನಿರ್ಧಾರವಾಯಿತೇನೋ ಎಂದು ಅವನಿಗೆ ಇತ್ತೀಚಿನ ಕೆಲವು ದಿನಗಳಿಂದ ಅನಿಸಲಾರಂಭಿಸಿದೆ.

ಕಥೆಯಲ್ಲಿ ವಸುಮತಿಯನ್ನು ಪರಿಚಯಿಸುವಾಗ ಪ್ರತಿಭಾವಂತ ವಿದ್ಯಾರ್ಥಿನಿ ಎಂದೇ ಪರಿಚಯಿಸಿದ್ದ. ಪ್ರೊಫೆಸರ್ ಬದರಿನಾಥ ಅವರಂತಹ ವಿದ್ವತ್‌ಪೂರ್ಣ ವ್ಯಕ್ತಿಯ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಮಾಡಲು ಅವಕಾಶ ಕಲ್ಪಿಸಿದ್ದ. ಕಥೆಗೆ ಒಂದು ಅಚ್ಚರಿಯ ತಿರುವು ಕೊಡಲು ಅವರಿಬ್ಬರನ್ನು ಮದುವೆ ಮಾಡಿಸಿದ್ದೇ ತನ್ನಿಂದ ತಪ್ಪಾಯಿತೇನೋ ಎಂದು ಅನಿಸಿತು. ನಿವೃತ್ತಿಗೆ ಹತ್ತಿರದಲ್ಲಿರುವ ವಯಸ್ಸಿನ ಪ್ರೊಫೆಸರ್ ಮತ್ತು ಇಪ್ಪತ್ತಾರರ ಹರೆಯದ ವಸುಮತಿಯ ಕಥೆಗೆ ಇಜ್ಜೋಡು ಎಂದು ಹೆಸರಿಸಿದ್ದ. ಈಗಾಗಲೇ ಮದುವೆಯಾಗಿ ಮೊಮ್ಮಕ್ಕಳನ್ನು ಕಂಡಿರುವ ಪ್ರೊಫೆಸರ್ ಬದರಿನಾಥರ ಹೃದಯದಲ್ಲಿ ಪ್ರೀತಿಯ ಸೆಲೆ ಚಿಮ್ಮಿಸಿ ವಸುಮತಿಯನ್ನು ಮದುವೆಯಾಗುವಂತೆ ಮಾಡಿದ್ದ. ವಯಸ್ಸಿನ ಅಂತರದ ಕಾರಣದಿಂದ ಸಹಜವಾಗಿಯೇ ಬದರಿನಾಥರ ಮನಸ್ಸಿನ ಮೂಲೆಯಲ್ಲಿ ಸಂಶಯ ಹೊಗೆಯಾಡಲಾರಂಭಿಸಿತು. ವಸುಮತಿ ನನ್ನ ವೈಫಲ್ಯಕ್ಕೆ ಪರಿಹಾರವನ್ನು ದಿನಕರನಲ್ಲಿ ತುಂಬಿಸಿಕೊಳ್ಳುತ್ತಿರುವಳೇನೋ ಎನ್ನುವ ಅನುಮಾನ ಅವರಲ್ಲಿ ಹುತ್ತಗಟ್ಟತೊಡಗಿತು. ವಸುಮತಿಯನ್ನು ಮನೆಯಿಂದ ಹೊರಹಾಕಿಸಿ ಬದರಿನಾಥರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಕಥೆಗೊಂದು ತಾರ್ಕಿಕ ಅಂತ್ಯ ಕೊಟ್ಟಿದ್ದ ಪದ್ಮನಾಭ.

ವಸುಮತಿ ಬಂದು ಹೋದ ದಿನದಿಂದ ಪದ್ಮನಾಭನಿಗೆ ತಾನು ಇಜ್ಜೋಡು ಕಥೆಯಲ್ಲಿ ಯಾವ ಯಾವ ಪಾತ್ರಗಳಿಗೆ ಅನ್ಯಾಯ ಮಾಡಿದ್ದೇನೆ ಎಂದು ಯೋಚಿಸುವುದೇ ದಿನನಿತ್ಯದ ಕೆಲಸವಾಯಿತು. ಕಚೇರಿಯ ಕೆಲಸದ ವೇಳೆಯಲ್ಲೂ ಯೋಚನೆ ಮನಸ್ಸನ್ನು ಆವರಿಸಿ ತನ್ನಿಂದ ಅನ್ಯಾಯವಾದ ಪಾತ್ರಗಳಿಗೆ ಹೇಗೆ ನ್ಯಾಯ ಒದಗಿಸಬೇಕೆಂದು ಗಾಳಿಯಲ್ಲಿ ಕೈಯಾಡಿಸುತ್ತ, ತನ್ನೊಂದಿಗೆ ತಾನೇ ಮಾತನಾಡುತ್ತಿದ್ದವನನ್ನು ಸಹೋದ್ಯೋಗಿಗಳು ವಿಚಿತ್ರಜೀವಿ ಎನ್ನುವಂತೆ ನೋಡಲಾರಂಭಿಸಿದರು. ಕಚೇರಿಯ ಕೆಲಸಕ್ಕೆ ತನ್ನನ್ನು ಹುಡುಕಿಕೊಂಡು ಬರುವ ಹೆಣ್ಣುಮಕ್ಕಳಲ್ಲಿ ವಸುಮತಿ ಮತ್ತು ಪಾರ್ವತಿಯನ್ನು ಹುಡುಕಲಾರಂಭಿಸಿದವನಿಗೆ ವಸುಮತಿ ಮತ್ತೆ ಕಥೆಯ ಪುಸ್ತಕದಲ್ಲಿ ಕಾಣಿಸಿಕೊಳ್ಳದೆ ಹೋದದ್ದು ಯಕ್ಷಪ್ರಶ್ನೆಯಾಗಿ ಕಾಡಲಾರಂಭಿಸಿತು.

***

ರಾತ್ರಿ ಊಟ ಮಾಡಿ ಕಥೆಯ ಪುಸ್ತಕ ಕೈಯಲ್ಲಿ ಹಿಡಿದ ಪದ್ಮನಾಭ ಇಜ್ಜೋಡು ಕಥೆಯ ಪುಟ